## ಇಲಿಯಾನಾ ಕಿಡಿ

ಇಲಿಯಾನ ಡಿಕ್ರೂಸ್ ತನ್ನ ಬಿಂದಾಸ್ ಮಾತು ಮತ್ತು ಛಾಯಾಚಿತ್ರಗಳಿಂದಲೇ ಹೆಚ್ಚು ಖ್ಯಾತಿ ಪಡೆದವಳು. 'ರೈಡ್' ಚಿತ್ರ ಆಕೆಗೆ ಅತ್ಯಧಿಕ ಜನಪ್ರಿಯತೆ ತಂದುಕೊಟ್ಟಂತೆಯೇ, ಆಕೆಯ ಬಿಂದಾಸ್ ನಡವಳಿಕೆ ಹೆಚ್ಚು ಟೀಕಾಕಾರರನ್ನೂ ಸೃಷ್ಟಿಸಿದೆ. ಇನ್‌ಸ್ಟಾಗ್ರಾಮ್‌ನಲ್ಲಿ ಸದಾ ತನ್ನ ಮೈಮಾಟವನ್ನು ಪ್ರದರ್ಶಿಸುವ ಚಿತ್ರಗಳನ್ನು ಅಪ್‌ಲೋಡ್ ಮಾಡುವ ಇಲಿಯಾನಾಳನ್ನು ಟ್ರೋಲ್ ಮಾಡುವವರ ಸಂಖ್ಯೆಯೂ ದೊಡ್ಡದಿದೆ. ಆದರೆ ಟ್ರೋಲ್‌ಗಳಿಗೆ ಬೆದರುವ ಹೆಣ್ಣು ತಾನಲ್ಲ ಎನ್ನುವುದನ್ನು ಇಲಿಯಾನಾ ಮತ್ತಷ್ಟು ಚಿತ್ರಗಳನ್ನು ಅಪ್‌ಲೋಡ್ ಮಾಡುವ ಮೂಲಕ ತೋರಿಸಿದ್ದಾಳೆ.

ಇಲಿಯಾನಾ ತನ್ನ ಆಸ್ಟ್ರೇಲಿಯನ್ ಬಾಯ್‌ಫ್ರೆಂಡ್, ಛಾಯಾಗ್ರಾಹಕ ಆ್ಯಂಡ್ರೂ ನೀಬೋನ್ ಬಗ್ಗೆಯೂ ಭಿಡೆಯಿಲ್ಲದೆ ಮಾತನಾಡುತ್ತಾಳೆ. ಆದರೆ ಆಕೆ ಗರ್ಭಿಣಿಯಾಗಿದ್ದಾಳೆ ಎಂಬ ಗಾಳಿಸುದ್ದಿಯ ಬಗ್ಗೆ ಮಾತ್ರ ಸಿಟ್ಟಿನಿಂದ ಮಾತನಾಡುತ್ತಾಳೆ. 'ಗರ್ಭಿಣಿಯಾಗಬೇಕೆಂದು ನನಗೂ ಇಷ್ಟವಿದೆ. ಆದರೆ ಈಗ ಆಗಿಲ್ಲ. ಇಲ್ಲದ್ದನ್ನು ಏಕೆ ಸೃಷ್ಟಿಸಿ ಬರೆಯುತ್ತೀರಿ?' ಎಂದು ಜಾಲತಾಣಿಗರ ಮೇಲೆ ಇಲಿಯಾನಾ ಹರಿಹಾಯ್ದಿದ್ದಾಳೆ. 'ಹೌದು, ನಾನೊಬ್ಬಳು ಸಾರ್ವಜನಿಕ ವ್ಯಕ್ತಿ. ಆದರೆ ಸಾರ್ವಜನಿಕ ಆಸ್ತಿಯಲ್ಲ. ನನ್ನ ಬಗ್ಗೆ ಇಲ್ಲಸಲ್ಲದ್ದನ್ನು ಬರೆಯುವವರು ತಮ್ಮ ಹೆಂಡತಿ, ತಂಗಿಯರ ಬಗ್ಗೆಯೂ ಹಾಗೆಯೇ ಭಾವಿಸುತ್ತಾರೆಯೆ? ನಾನೂ ಒಬ್ಬ ಮಹಿಳೆ. ನನ್ನನ್ನೂ ಗೌರವದಿಂದ ನಡೆಸಿಕೊಳ್ಳಿ' ಎಂದು ಆಕೆ ಇತ್ತೀಚಿನ ಸಂದರ್ಶನವೊಂದರಲ್ಲಿ ಸಿಟ್ಟಿಗೆದ್ದಿರುವುದೂ ನಡೆದಿದೆ.

18ರ ಹರೆಯದಲ್ಲೇ ದೇವದಾಸು ಚಿತ್ರದ ಮೂಲಕ ತೆಲುಗು ಸಿನಿಪ್ರೇಕ್ಷಕರನ್ನು ರಂಜಿಸಿದ ಇಲಿಯಾನಾ, 2–3 ವರ್ಷಗಳ ಕಾಲ ಕೈಗೆ ಸಿಕ್ಕಿದ ಸಿನಿಮಾಗಳಲ್ಲೆಲ್ಲ ನಟಿಸಿದಳು. ಆದರೆ ಈಗ ಆಕೆ ಹೆಚ್ಚು ಚ್ಯೂಸಿಯಂತೆ. ರುಸ್ತುಂ, ಬಾದ್‌ಶಾಹೊ ಮುಂತಾದ ಚಿತ್ರಗಳು ಆಕೆ ನಟನಾ ಪ್ರತಿಭೆಯನ್ನೂ ಒರೆಗೆ ಹಚ್ಚಿವೆ.





## 'ರ್‍ಯಾಂಬೊ ಟೈಗರ್

ಹಾಲಿವುಡ್‌ನ ಆ್ಯಕ್ಷನ್ ಹೀರೊ ಸಿಲ್ವೆಸ್ಟರ್ ಸ್ಟಾಲನ್ ಅಭಿನಯದ ಸೂಪರ್ ಹಿಟ್ 'ರ್‍ಯಾಂಬೊ' ಸರಣಿಯ ಸಿನಿಮಾ ಈಗ ಹಿಂದಿಗೆ ಬರುತ್ತಿದೆ. ಹಿಂದಿಯಲ್ಲಿ ಸಮರಕಲೆಗಳ ನಿಷ್ಣಾತ ಟೈಗರ್ ಶ್ರಾಫ್ ಈಗ ರ್‍ಯಾಂಬೊ ಆಗಿ ತೆರೆಗೆ ಬರಲಿದ್ದಾನೆ. 'ಚಿಕ್ಕಂದಿನಿಂದಲೂ ನನಗೆ ಆ್ಯಕ್ಷನ್ ಸಿನಿಮಾಗಳ ಹುಚ್ಚು. ಅದರಲ್ಲೂ ಸ್ಟಾಲನ್ ಚಿತ್ರಗಳನ್ನು ನೋಡಿದ್ದಕ್ಕೆ ಲೆಕ್ಕವಿಲ್ಲ. ಈಗ ಆತ ನಟಿಸಿದ ಚಿತ್ರಗಳನ್ನು ಹಿಂದಿಯಲ್ಲಿ ನಾನೇ ಅಭಿನಯಿಸುತ್ತಿರುವುದು ಖುಷಿ ಅನ್ನಿಸಿದೆ. ನನಗೆ ಗೊತ್ತು– ಸ್ಟಾಲನ್ ಮಟ್ಟಕ್ಕೆ ನಾನು ಅಭಿನಯಿಸಲು ಸಾಧ್ಯವೇ ಇಲ್ಲ. ಆದರೆ ಚಿಕ್ಕಂದಿನಿಂದಲೂ ಕಾಣುತ್ತಿದ್ದ ಕನಸೊಂದು ನನಸಾಗಿದೆ ಎನ್ನುವುದು ನಿಜ' ಎಂದಿದ್ದಾನೆ ಟೈಗರ್ ಶ್ರಾಫ್.

ಈ ಚಿತ್ರವನ್ನು ಸಿದ್ಧಾರ್ಥ್ ಆನಂದ್ ನಿರ್ದೇಶಿಸುತ್ತಿದ್ದು, 2018ರ ಕೊನೆಗೆ ಶೂಟಿಂಗ್ ಶುರುವಾಗಲಿದೆ. ಸಿದ್ಧಾರ್ಥ್ ಆನಂದ್ ನಿರ್ದೇಶನ/ ನಿರ್ಮಾಣದ ಇನ್ನೊಂದು ಸಿನಿಮಾದಲ್ಲಿ ನಟಿಸಲೂ ಟೈಗರ್ ಶ್ರಾಫ್ ಆಯ್ಕೆ ಆಗಿದ್ದಾನೆ. ಈ ಹೊಸ ಚಿತ್ರದಲ್ಲಿ ಆತನ ಜತೆಗೆ ನಟಿಸುವಾತ ಹೃತಿಕ್ ರೋಶನ್. ಈ ಚಿತ್ರವೂ ಈ ವರ್ಷ ಶೂಟಿಂಗ್ ಆರಂಭಿಸಲಿದ್ದು ಮುಂದಿನ ವರ್ಷ ಬಿಡುಗಡೆ ಕಾಣಲಿದೆ. ಈ ಮಧ್ಯೆ ಟೈಗರ್ ಅಭಿನಯದ 'ಭಾಗಿ–3' ಚಿತ್ರ ಸಾಕಷ್ಟು ಸುದ್ದಿ ಮಾಡಿದೆ. 'ಭಾಗಿ' ಚಿತ್ರ ಸೂಪರ್‌ಹಿಟ್ ಆಗಿದ್ದ ಹಿನ್ನೆಲೆಯಲ್ಲೇ ಇತ್ತೀಚೆಗೆ 'ಭಾಗಿ–2' ಶೂಟಿಂಗ್ ಮುಕ್ತಾಯವಾಗಿದೆ. ಎರಡನೇ ಭಾಗ ಇನ್ನೂ ಬಿಡುಗಡೆಯಾಗುವ ಮುನ್ನವೇ 'ಭಾಗಿ–3' ಸುದ್ದಿ ಮಾಡುತ್ತಿರುವುದು ಬಾಲಿವುಡ್ ಮಟ್ಟಿಗೆ ದಾಖಲೆಯೇ!